ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

27

ಇಲಾಖೆ / ವಿಷಯ : DEPARTMENT / SUBJECT: ಸಂಸತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ  ದಿನಾಂಕ : DATE : 3/2/2021

# ಸಂಸತ್‌ನಲ್ಲಿ ನಡೆಯದ ಕಲಾಪ

## ಕೃಷಿ ಕಾಯಿದೆ ಚರ್ಚೆಗೆ ಪ್ರತಿಪಕ್ಷಗಳ ಆಗ್ರಹ

**ಹೊಸದಿಲ್ಲಿ:** ಮೂರು ಕೃಷಿ ಕಾಯಿದೆಗಳ ಕುರಿತು ಚರ್ಚೆಗೆ ಆಗ್ರಹಿಸಿ ಪ್ರತಿಪಕ್ಷಗಳು ಪ್ರತಿಭಟನೆ ನಡೆಸಿದ್ದರಿಂದಾಗಿ ಸಂಸತ್‌ನ ಉಭಯ ಸದನಗಳಲ್ಲಿ ಮಂಗಳವಾರ ಯಾವುದೇ ಕಲಾಪ ನಡೆಯಲಿಲ್ಲ.

ಬೆಳಗ್ಗೆ ರಾಜ್ಯಸಭೆಯಲ್ಲಿ ಸದನ ಸೇರುತ್ತಿದ್ದಂತೆಯೇ ಕಾಂಗ್ರೆಸ್, ಡಿಎಂಕೆ, ಟಿಎಂಸಿ, ಆರ್‌ಜೆಡಿ, ಎಡಪಕ್ಷಗಳ ಸದಸ್ಯರು, ''ಎಲ್ಲಾ ಕಲಾಪ ಕೈಬಿಟ್ಟು ಕೃಷಿ ಕಾಯಿದೆಗಳ ಕುರಿತು ಚರ್ಚೆಗೆ ಅವಕಾಶ ನೀಡಬೇಕು,'' ಎಂದು ಆಗ್ರಹಿಸಿದರು. ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ಅದಕ್ಕೆ ಒಪ್ಪದೇ ಇದ್ದಾಗ ಸಭಾತ್ಯಾಗ ಮಾಡಿದರು. ಪ್ರಶ್ನೋತ್ತರ ಕಲಾಪ ಆರಂಭಿಸುತ್ತಿದ್ದಂತೆಯೇ ಪುನಃ ಸದನಕ್ಕೆ ಆಗಮಿಸಿ, ಸಭಾಪತಿ ಪೀಠದ ಬಳಿ ತೆರಳಿ ಧರಣಿ ಆರಂಭಿಸಿದರು. ''ಸಭಾತ್ಯಾಗ ಮಾಡಿದವರು ಮತ್ತೆ ಬಂದು ಧರಣಿ ನಡೆಸುವುದು ಸರಿಯಲ್ಲ,'' ಎಂದು ನಾಯ್ಡು ಹೇಳಿದರೂ ಪ್ರತಿಪಕ್ಷ ಸದಸ್ಯರು ಕಿವಿಗೇ ಹಾಕಿಕೊಳ್ಳಲಿಲ್ಲ. ಹೀಗಾಗಿ 40 ನಿಮಿಷ ಕಲಾಪ ಮುಂದೂಡಲಾಯಿತು.




ವಿ.ಕ 3/2/21

ಬೆಳಗ್ಗೆ 10.30ಕ್ಕೆ ಪುನಃ ಸದನ ಸೇರಿದಾಗಲೂ ಪ್ರತಿಪಕ್ಷಗಳ ಧರಣಿ ಮುಂದುವರಿಯಿತು. ''ಪ್ರಶ್ನೋತ್ತರ ಕಲಾಪ ಬೇಕೆಂದು ಪ್ರತಿಪಕ್ಷಗಳೇ ಆಗ್ರಹಿಸಿದ್ದವು. ಈಗ ಅವರೇ ಧರಣಿ ನಡೆಸುತ್ತಿದ್ದಾರೆ. ಪ್ರಶ್ನೋತ್ತರ ಕಲಾಪದ ಕುರಿತು ಪ್ರತಿಪಕ್ಷಗಳು ನಿಲುವು ಸ್ಪಷ್ಟಪಡಿಸಲಿ,'' ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ ಆಗ್ರಹಿಸಿದರು. ಗದ್ದಲ ಮುಂದುವರಿದ ಕಾರಣ ಎರಡು ಸಲ ಕಲಾಪ ಮುಂದೂಡಲಾಯಿತು. ಮಧ್ಯಾಹ್ನ 12.30ಕ್ಕೆ ಸದನ ಸೇರಿದಾಗಲೂ ಪ್ರತಿಪಕ್ಷಗಳು ಪಟ್ಟು ಸಡಿಲಿಸದ ಕಾರಣ ಸದನವನ್ನು ಬುಧವಾರಕ್ಕೆ ಮುಂದೂಡಲಾಯಿತು. ರಾಜ್ಯಸಭೆಯಲ್ಲಿ ಮಂಗಳವಾರ ನಾಲ್ಕು ವಿಧೇಯಕಗಳು ಮಂಡನೆಯಾಗಬೇಕಿತ್ತು.

ಲೋಕಸಭೆಯಲ್ಲಿಯೂ ಸಂಜೆ ಪ್ರಶ್ನೋತ್ತರ ಕಲಾಪ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಸಂಸದೀಯ ನಾಯಕ ಅಧೀರ್ ರಂಜನ್ ಚೌಧರಿ ಅವರು, ''ಪ್ರತಿಭಟನೆ ನಡೆಸುತ್ತಿರುವ 170 ರೈತರು ಮೃತಪಟ್ಟಿದ್ದಾರೆ. ರೈತ ಹೋರಾಟಗಾರರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ,'' ಎಂದು ವಿಷಯ ಪ್ರಸ್ತಾಪಿಸಲು ಯತ್ನಿಸಿದರು. ತಕ್ಷಣ ಕಾಂಗ್ರೆಸ್, ಶಿರೋಮಣಿ ಅಕಾಲಿದಳ ಸೇರಿದಂತೆ ಇತರ ಪ್ರತಿಪಕ್ಷಗಳ ಸದಸ್ಯರು ಕೃಷಿ ಕಾಯಿದೆಗಳ ಕುರಿತು ಚರ್ಚೆಗೆ ಆಗ್ರಹಿಸಿ ಧರಣಿ ನಡೆಸಲು ಮುಂದಾದರು. ''ಪ್ರಶ್ನೋತ್ತರದಲ್ಲಿ ರೈತರಿಗೆ ಸಂಬಂಧಿಸಿದ ವಿಷಯವನ್ನು ಪಟ್ಟಿ ಮಾಡಲಾಗಿದೆ. ಪ್ರತಿಪಕ್ಷಗಳ ಸದಸ್ಯರು ಆಗ ಮಾತನಾಡಬಹುದು,'' ಎಂದು ಸ್ಪೀಕರ್ ಓಂ ಬಿರ್ಲಾ ಸಲಹೆ ನೀಡಿದರು. ಪ್ರತಿಪಕ್ಷಗಳು ಅದಕ್ಕೆ ಮಣಿಯದೇ ಇದ್ದಾಗ, ''ರಾಷ್ಟ್ರಪತಿ ಭಾಷಣದ ಕುರಿತು ವಂದನಾ ನಿರ್ಣಯದ ಚರ್ಚೆ ವೇಳೆ ವಿಷಯ ಪ್ರಸ್ತಾಪಿಸಿ,'' ಎಂದು ಸ್ಪೀಕರ್ ಮತ್ತೊಂದು ಸಲಹೆ ನೀಡಿದರು. ಅದಕ್ಕೂ ಪ್ರತಿಪಕ್ಷಗಳು ಕಿವಿಗೊಡಲಿಲ್ಲ. ಹೀಗಾಗಿ ಎರಡು ಸಲ ಕಲಾಪ ಮುಂದೂಡಿದ ಬಳಿಕ ಅಂತಿಮವಾಗಿ ಸದನವನ್ನು ಬುಧವಾರಕ್ಕೆ ಮುಂದೂಡಲಾಯಿತು.

● ರೈತರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸದನದ ಒಳಗೆ ಮತ್ತು ಹೊರಗೆ ಮುಕ್ತವಾಗಿ ಚರ್ಚೆ ಮಾಡಲು ಸರಕಾರ ಸಿದ್ಧವಿದೆ. ಚರ್ಚೆಯಿಂದ ಸರಕಾರ ಹಿಂದೆ ಸರಿಯುವುದಿಲ್ಲ.

**- ನರೇಂದ್ರ ಸಿಂಗ್ ತೋಮರ್**
ಕೃಷಿ ಸಚಿವ

● ಕಳೆದ ಬಾರಿಯ ಅಹಿತಕರ ಘಟನೆ ಮರುಕಳಿಸಬಾರದು. ಸದಸ್ಯರು ಘನತೆಯಿಂದ ಕಲಾಪದಲ್ಲಿ ಭಾಗವಹಿಸಿ ಅರ್ಥಪೂರ್ಣ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

**- ಎಂ.ವೆಂಕಯ್ಯ ನಾಯ್ಡು**
ರಾಜ್ಯಸಭೆ ಸಭಾಪತಿ